ದಿನಾಂಕಃ21-11-2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ **ಶ್ರೀ ಎಸ್.ಜಿ.ಕೆ ವಕೀಲರಿಂದಃ**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

ವಾದಿ ಸಂಸ್ಥೆಗಳು ಸಾಕ್ಷಿದಾರರಿಗೆ ಪ್ರಕರಣ ನಡೆಸಲು ನೀಡಿರುವ ರೆಜಲೂಷನ್ ನ ದೃಢೀಕೃತ ಪ್ರತಿಯನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ 25-07-2016 ರ ದೃಢೀಕರಿಸಿದ ಅಗ್ರೀಮೆಂಟ್ ಆಫ್ ಸೇಲ್ ಅನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕ 01-08-2016 ರ ದೃಢೀಕರಿಸಿದ ಜಿಪಿಎ ಅನ್ನು ಪ್ರತಿವಾದಿ ಪರ ವಕೀಲರ ತಕ್ರಾರಿಗೆ ಒಳಪಟ್ಟು ನಿಪಿ-3 ಎಂದು ಗುರುತಿಸಲಾಯಿತು. ದಿನಾಂಕ 27-12-2018 ರ ದೃಢೀಕರಿಸಿದ ಕ್ರಯಪತ್ರವನ್ನು ನಿಪಿ-4 ಎಂದು ಗುರುತಿಸಲಾಯಿತು. ದಿನಾಂಕ 08-06-2020 ರ ವಕೀಲರ ನೋಟಿಸಿನ ಕಚೇರಿಯ ಪ್ರತಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ನಾಲ್ಕು

ಅಂಚೆ ರಶೀದಿಗಳನ್ನು ನಿಪಿ-6 ರಿಂದ ನಿಪಿ-9 ಎಂದು ಗುರುತಿಸಲಾಯಿತು. ವಾಪಸ್ಸಾದ 2 ಅಂಚೆ ಲಕೋಟೆಗಳನ್ನು ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಯಿತು. 2 ಅಂಚೆ ಸ್ವೀಕೃತಿಗಳನ್ನು ನಿಪಿ-12 ಮತ್ತು ನಿಪಿ-13 ಎಂದು ಗುರುತಿಸಲಾಯಿತು. ಸರ್ವೆ ನಂಬರ 49/*/1 ಕ್ಕೆ ಸಂಬಂಧಿಸಿದ ಪಹಣಿ ಪತ್ರಿಕೆಯನ್ನು ನಿಪಿ-14 ಎಂದು ಗುರುತಿಸಲಾಯಿತು. ದಿನಾಂಕ 30-03-2017 ರಂದು ಜಿಲ್ಲಾಧಿಕಾರಿ ಕಚೇರಿಯವರು ನೀಡಿರುವ ಅರ್ಜಿಯನ್ನು ನಿಪಿ-15 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.